# ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ರಿಜಿಸ್ಟರ್ ನಂಬ್ರ 13754 / 97-98

ರೋಯಲ್ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮುಖ್ಯ ರಸ್ತೆ, ಬಂಟ್ವಾಳ ತಾಲೂಕು-574 219

Ph. : 234026
Website : www.bcccsociety.com
E-mail : bcccsociety@gmail.com

ದಿನಾಂಕ :
07-09-2024, ಶನಿವಾರ

ಸಮಯ :
ಪೂರ್ವಾಹ್ನ ಗಂಟೆ 11:00

BANTWAL CATHOLIC CREDIT CO-OPERATIVE SOCIETY LTD.
PROSPERITY GROWTH UNITY
ESTD 1997
JODUMARGA

## 2023-2024ನೇ ಸಾಲಿನ ವಾರ್ಷಿಕ ವರದಿ

ಮತ್ತು

## 27ನೇ ವಾರ್ಷಿಕ ಮಹಾಸಭೆಯ ಆಮಂತ್ರಣ

ಸ್ಥಳ : "ಸ್ಪರ್ಶಾ ಕಲಾಮಂದಿರ", ಬಿ.ಸಿ.ರೋಡು, ಜೋಡುಮಾರ್ಗ ಉದ್ಯಾನವನದ ಬಳಿ

Scan for Location

# ಆಡಳಿತ ಮಂಡಳಿ



**ಶ್ರೀ ಜೀವನ್ ಲೋಯ್ಡ್ ಪಿಂಟೊ**
ಅಧ್ಯಕ್ಷರು



**ಶ್ರೀ ವಲೇರಿಯನ್ ಬರೆಟ್ಟೊ**
ಉಪಾಧ್ಯಕ್ಷರು



**ಶ್ರೀ ಹೆನ್ರಿ ಪಾಸ್ಕಲ್ ಪಿರೇರಾ**
ನಿರ್ದೇಶಕರು



**ಶ್ರೀ ಹ್ಯೂಬರ್ಟ್ ಲೋಬೊ**
ನಿರ್ದೇಶಕರು



**ಶ್ರೀ ಎವ್ವಿನ್ ಲೋಬೊ**
ನಿರ್ದೇಶಕರು



**ಶ್ರೀ ಡೆನಿಸ್ ಪಿಂಟೊ**
ನಿರ್ದೇಶಕರು



**ಶ್ರೀ ಫ್ರಾನ್ಸಿಸ್ ಮೆಂಡೊನ್ಸಾ**
ನಿರ್ದೇಶಕರು



**ಶ್ರೀ ಲಾದ್ರು ಮಿನೇಜಸ್**
ನಿರ್ದೇಶಕರು



**ಶ್ರೀ ರಿಚರ್ಡ್ ಮಿನೇಜಸ್**
ನಿರ್ದೇಶಕರು



**ಶ್ರೀಮತಿ ಬೆನೆಡಿಕ್ಟಾ ಜೆ. ಮೊಂತೆರೊ**
ನಿರ್ದೇಶಕರು



**ಶ್ರೀ ಜೋನ್ ಪ್ರಕಾಶ್ ಪಿಂಟೊ**
ನಿರ್ದೇಶಕರು



**ಶ್ರೀ ವಿನ್ಸೆಂಟ್ ಕ್ಲಾಡಿ ಕಾರ್ಲೊ**
ನಿರ್ದೇಶಕರು



**ಶ್ರೀಮತಿ ಬೆನೆಡಿಕ್ಟಾ ಸಲ್ಡಾನ್ಹ**
ನಿರ್ದೇಶಕರು



**ಶ್ರೀಮತಿ ಸೆಲಿನ್ ಗ್ರೇಸಿ ಡಿಸೋಜ**
ಮುಖ್ಯ ಕಾರ್ಯ ನಿರ್ವಹಣಾಧಿಕಾರಿ

## ಸರಳ ಬಡ್ಡಿದರದಲ್ಲಿ ಸಾಲ ಸೌಲಭ್ಯಗಳು

* ಠೇವಣಿ ಆಧಾರಿತ ಸಾಲ
* ಸ್ಥಿರಾಸ್ತಿ ಅಡಮಾನ ಸಾಲ
* ಗೃಹ ನಿರ್ಮಾಣ/ ಗೃಹ ಖರೀದಿ/ ರಿಪೇರಿ ಸಾಲ
* ಹಳೇ ವಾಹನ ಆಧಾರ ಸಾಲ
* ಹೊಸ ವಾಹನ ಸಾಲ



**ಗೃಹ ನಿರ್ಮಾಣ ಸಾಲ**
**11.50%**

**ವಾಹನ ಸಾಲ**
**11.00%**





**ಹೊಸ ವಾಹನ ಸಾಲಕ್ಕೆ ತಕ್ಷಣ ಸಾಲ ಮಂಜೂರಾತಿ ಸೌಲಭ್ಯ**

**ಅಡಮಾನ ಸಾಲ**
**13.50%**

# GOLD LOAN

## ಚಿನ್ನಾಭರಣ ಈಡಿನ ಸಾಲ

**ಗ್ರಾಂ ಒಂದಕ್ಕೆ ಗರಿಷ್ಠ ಸಾಲ**

**₹ 100 ಕ್ಕೆ ತಿಂಗಳಿಗೆ ಕೇವಲ ₹ 0.90 ಪೈಸೆ ಬಡ್ಡಿ ಮಾತ್ರ.**



### ನಮ್ಮಲ್ಲಿರುವ ಸೌಲಭ್ಯಗಳು

- ಸಂಘದ ಸದಸ್ಯರಿಗೆ ಯಶಸ್ವಿನಿ ವಿಮಾ ಸೌಲಭ್ಯ.
- ಬಿ.ಸಿ.ರೋಡ್ ಶಾಖೆಯಲ್ಲಿ ಲಾಕರ್ ಸೌಲಭ್ಯ.
- RTGS/ NEFT
- Core Banking
- SMS Facility



**ಇ-ಸ್ಟ್ಯಾಂಪ್ ಸೌಲಭ್ಯ**
**ಬಿ.ಸಿ.ರೋಡ್ ಹಾಗೂ ಕಲ್ಲಡ್ಕ ಶಾಖೆಯಲ್ಲಿ ಲಭ್ಯ**

# ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಇದರ ಪ್ರಧಾನ ಕಛೇರಿ ಹಾಗೂ ಬಿ.ಸಿ.ರೋಡು ಶಾಖೆಯ

## ನೂತನ ಕಟ್ಟಡದ

## ಶಿಲಾನ್ಯಾಸ ಸಮಾರಂಭ



ದಿನಾಂಕ : 07-09-2024ನೇ ಶನಿವಾರ ಬೆಳಿಗ್ಗೆ ಗಂಟೆ 9:30ಕ್ಕೆ

ಸ್ಥಳ : ಬೆಸ್ಟ್ ಇಂಗ್ಲೀಷ್ ಮೀಡಿಯಂ ಶಾಲೆಯ ಹತ್ತಿರ, ಕೈಕಂಬ, ಬಿ.ಸಿ.ರೋಡು.

Scan for Location

ಸರ್ವರಿಗೂ ಆದರದ ಸ್ವಾಗತ ಬಯಸುವ

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು
ಮತ್ತು ಸಿಬ್ಬಂದಿ ವರ್ಗ

**9.50%**

ಹಿರಿಯ ನಾಗರಿಕರಿಗೆ

## ನಿರಖು ಠೇವಣಿ ಮೇಲೆ ವಿಶೇಷ ಬಡ್ಡಿದರಗಳು

| | | |
|---|---|---|
| 1 ವರ್ಷದಿಂದ 3 ವರ್ಷ | - | 8.50 % |
| 3 ವರ್ಷ ಮೇಲ್ಪಟ್ಟು | - | 9.00 % |

| | | |
|---|---|---|
| 15 ದಿನಗಳಿಂದ 45 ದಿನಗಳವರೆಗೆ | - | 4.00 % |
| 46 ದಿನಗಳಿಂದ 90 ದಿನಗಳವರೆಗೆ | - | 5.00 % |
| 91 ದಿನಗಳಿಂದ 180 ದಿನಗಳವರೆಗೆ | - | 6.50 % |
| 181 ದಿನಗಳಿಂದ 364 ದಿನಗಳವರೆಗೆ | - | 7.00 % |

**ವಿಶೇಷ ನಗದು ಪತ್ರ**
**ಠೇವಣಿ 100 ತಿಂಗಳಿಗೆ ದ್ವಿಗುಣ**

*If undelivered please return to :*

ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ರೋಯಲ್ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎದುರು,
ಮುಖ್ಯ ರಸ್ತೆ, ಜೋಡು ಮಾರ್ಗ, ಬಂಟ್ವಾಳ ತಾಲೂಕು-574 219.

To,

ತೆರೆದ ಅಂಚೆ

ಸದಸ್ಯರು ಮಹಾಸಭೆಗೆ ಬರುವಾಗ ಈ ವರದಿಯನ್ನು ತರಬೇಕಾಗಿ ವಿನಂತಿ.

Amar Printers - 9482486971

# ಅಧ್ಯಕ್ಷರ ನುಡಿಗಳು



ಆತ್ಮೀಯ ಸದಸ್ಯರೇ,

ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಗೌರವಾನ್ವಿತ ಸದಸ್ಯರಾದ ತಮಗೆ ಸಂಘವು ನಡೆಸುವ 27ನೇ ವರ್ಷದ ಹಾಗೂ ಪ್ರಸ್ತುತ ಆಡಳಿತ ಮಂಡಳಿಯ ಕೊನೆಯ ವರ್ಷದ ಮಹಾಸಭೆಗೆ ಆಡಳಿತ ಮಂಡಳಿಯ ಪರವಾಗಿ ನೀಡುವ ಆತ್ಮೀಯ ಕರೆಯೋಲೆ ಹಾಗೂ ಅದೇ ದಿನ ಬೆಳಿಗ್ಗೆ ಗಂಟೆ 9.30ಕ್ಕೆ ನಡೆಯುವ ನೂತನ ಕಟ್ಟಡದ ಶಿಲಾನ್ಯಾಸ ಕಾರ್ಯಕ್ಕೆ ಸರ್ವರಿಗೂ ಆದರದ ಸ್ವಾಗತ.

ಪ್ರಸ್ತುತ ಆಡಳಿತ ಮಂಡಳಿಗೆ ಇದು ಕೊನೆಯ ಮಹಾಸಭೆ. ಐದು ವರ್ಷಗಳ ಹಿಂದೆ ನೀವು ನಮಗೆ ನೀಡಿದ ಈ ಜವಾಬ್ದಾರಿಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿದ ತೃಪ್ತಿ ನಮಗಿದೆ. ಈ ಅವಧಿಯಲ್ಲಿ ಸಂಸ್ಥೆ ಹಾಗೂ ನಿಮ್ಮ ಸೇವೆ ಮಾಡಲು ಅವಕಾಶ ದೊರಕಿದ್ದು, ನಮಗೆ ಅತೀವ ಸಂತೋಷವಾಗಿದೆ.

ನಾವು ಅಧಿಕಾರ ಕೈಗೆತ್ತಿಕೊಂಡ ಎರಡು ವರ್ಷಗಳಲ್ಲಿ ಕೋವಿಡ್ 19 ಮಹಾಮಾರಿ ಪಿಡುಗಿನಿಂದಾಗಿ ಇಡೀ ಆರ್ಥಿಕ ಜಗತ್ತು ನಲುಗಿತ್ತು, ಅದರಲ್ಲಿ ನಮ್ಮ ಸಂಸ್ಥೆಯು ಹೊರತಾಗಿರಲಿಲ್ಲ. ಆದರೂ ಕೂಡ ಈ ಎಲ್ಲಾ ಕಷ್ಟ-ನಷ್ಟ ಸವಾಲುಗಳನ್ನು ಧೈರ್ಯದಿಂದ ಸ್ವೀಕರಿಸಿ ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ವೈಯುಕ್ತಿಕ ಪ್ರತಿಫಲಾಪೇಕ್ಷೆ ಬಯಸದೆ ಆಡಳಿತ ಮಂಡಳಿ, ಪ್ರಾಮಾಣಿಕ ಸಿಬ್ಬಂದಿ ವರ್ಗ ಹಾಗೂ ತಮ್ಮೆಲ್ಲರ ಸಹಕಾರದಿಂದ ಸಂಸ್ಥೆಯನ್ನು ದಕ್ಷ ರೀತಿಯಲ್ಲಿ ಮುನ್ನಡೆಸಿದ್ದೇವೆ.

2020ರಲ್ಲಿ ರೂ.55 ಕೋಟಿಯಷ್ಟಿದ್ದ ಠೇವಣಿಯು ಪ್ರಸ್ತುತ ರೂ.109 ಕೋಟಿಯಷ್ಟಾಗಿದ್ದು, ಶೇ.98ರಷ್ಟು ಪ್ರಗತಿಯನ್ನು ಸಾಧಿಸಿದೆ. ರೂ.45 ಕೋಟಿಯಷ್ಟಿದ್ದ ಸದಸ್ಯರ ಹೊರಬಾಕಿ ಸಾಲವು ಪ್ರಸ್ತುತ ರೂ.96 ಕೋಟಿಯಷ್ಟು ತಲುಪಿದ್ದು ಶೇ.113ರಷ್ಟು ಪ್ರಗತಿಯನ್ನು ಕಂಡಿದೆ. ರೂ.62 ಕೋಟಿಯಷ್ಟಿದ್ದ ದುಡಿಯುವ ಬಂಡವಾಳ ರೂ.120 ಕೋಟಿಗೆ ತಲುಪಿದೆ. 2023-24ನೇ ಸಾಲಿನಲ್ಲಿ ಸಂಘವು ರೂ.695.92 ಕೋಟಿ ವಾರ್ಷಿಕ ವ್ಯವಹಾರವನ್ನು ಮಾಡಿದೆ ಎಂದು ಹೇಳಲು ಸಂತೋಷವಾಗುತ್ತದೆ.

ಈ ಅವಧಿಯಲ್ಲಿ ಸಂಘದ ಆರ್ಥಿಕ ತಳಪಾಯ ಸುದೃಢಗೊಳಿಸುವ ನಿಟ್ಟಿನಲ್ಲಿ ಹೆಚ್ಚಿನ ಗಮನ ಹರಿಸಲಾಗಿದೆ. ಅದೇ ರೀತಿ ಸಂಘವು ಪ್ರತಿ ವರ್ಷ ಲಾಭದಲ್ಲಿ ಗಣನೀಯ ವೃದ್ಧಿಯನ್ನು ಸಾಧಿಸಿದ್ದು, ವರದಿ ಸಾಲಿನಲ್ಲಿ ಸಂಸ್ಥೆಯು ರೂ.2.10 ಕೋಟಿ ಲಾಭಗಳಿಸಿದೆ.

ನಮ್ಮ ಈ ಅವಧಿಯಲ್ಲಿ ಸಂಘದ ಇತಿಹಾಸದಲ್ಲೇ ಮೈಲುಗಲ್ಲು ಹಾಕುವಂತಹ ಯೋಜನೆ ನೆರವೇರಿದೆ. ಸದಸ್ಯರ ಬಹುವರ್ಷಗಳ ಬೇಡಿಕೆಯಂತೆ ಸಂಘಕ್ಕೆ ಸ್ವಂತ ನಿವೇಶನ ಖರೀದಿಸಲಾಗಿದೆ. ಸದ್ರಿ ನಿವೇಶನದಲ್ಲಿ ಸಂಘಕ್ಕೆ ಸ್ವಂತ ಕಟ್ಟಡ ಕಟ್ಟಲು ರೂಪುರೇಷೆಗಳು ಪೂರ್ಣಗೊಂಡು ಕಟ್ಟಡದ ಕಾಮಗಾರಿಯು ಚಾಲನೆ ಪಡೆಯಲಿದೆ. ಸಂಸ್ಥೆಯು ಈಗಾಗಲೇ 9 ಶಾಖೆಗಳನ್ನು ಹೊಂದಿದ್ದು, 10ನೇ ಶಾಖೆ ಫಜೀರು ಗ್ರಾಮದ ಗ್ರಾಮಚಾವಡಿಯಲ್ಲಿ ತೆರೆಯಲು ಸಿದ್ಧವಾಗಿದೆ.

ನಮ್ಮ ಸಂಘವನ್ನು ಬಲಿಷ್ಠವಾಗಿ ಬೆಳೆಸಲು ತಮ್ಮ ಇನ್ನಷ್ಟು ಸಹಕಾರವನ್ನು ಆಶಿಸುತ್ತೇವೆ. ನಮ್ಮ ಸದಸ್ಯರು ನಮ್ಮ ಸಂಘದಲ್ಲಿಯೇ ಹೆಚ್ಚಿನ ವ್ಯವಹಾರ ನಡೆಸಬೇಕು ಇದೇ ನಮ್ಮ ಆಶಯ. ಇದಕ್ಕೆ ತಮ್ಮ ಸಂಪೂರ್ಣ ಸಹಕಾರವನ್ನು ಆಶಿಸುತ್ತಾ, ಈ ಸಂಸ್ಥೆಯನ್ನು ಕಟ್ಟಲು, ಬೆಳೆಸಲು ಸಧೃಡವಾಗಿ ನಿಲ್ಲಲು ಸಹಕರಿಸಿದ ಪ್ರತಿಯೊಬ್ಬರನ್ನು ಸ್ಮರಿಸುತ್ತಾ "ಸಹಕಾರಂ ಗೆಲ್ಗೆ" ಎಂಬ ಮಾತಿನೊಂದಿಗೆ ನನ್ನ ಈ ಅಧ್ಯಕ್ಷ ನುಡಿಗೆ ಅಂತಿಮ ಸ್ಪರ್ಶವನ್ನು ನೀಡುತ್ತೇನೆ.

**ಜೈ ಹಿಂದ್, ಜೈ ಸಹಕಾರ**

ಶುಭಾಶಯಗಳೊಂದಿಗೆ

– ಇಂತಿ

**ಜೀವನ್ ಲೋಯ್ಡ್ ಪಿಂಟೊ**

ಅಧ್ಯಕ್ಷರು

# ಶಾಖೆಗಳು

## 1 ಬಿ.ಸಿರೋಡ್ ಶಾಖೆ

ರೋಯಲ್ ಕಾಂಪ್ಲೆಕ್ಸ್, 1 ನೇ ಮಹಡಿ,
ಯೂನಿಯನ್ ಬ್ಯಾಂಕ್ ಆಫ್
ಇಂಡಿಯಾ ಎದುರು,
ಮುಖ್ಯ ರಸ್ತೆ, ಬಿ.ಸಿ.ರೋಡ್,
ಬಂಟ್ವಾಳ ತಾಲೂಕು–574219,
Ph : 08255–234026
8904089534
Email : bcccsbcroad@gmail.com

## 2 ಫರಂಗಿಪೇಟೆ ಶಾಖೆ

ವಿಶ್ವಾಸ್ ಸಿಟಿ ಸೆಂಟರ್ ಬಿಲ್ಡಿಂಗ್,
ಪುದು ಗ್ರಾಮ, ಫರಂಗಿಫೇಟೆ
ಬಂಟ್ವಾಳ –574143
Ph : 8904089536
Email : bcccsfarangipete@gmail.com

## 3 ಬಂಟ್ವಾಳ ಶಾಖೆ

ರಾಜಸೌಧ
ಬಂಟ್ವಾಳ ಕಸ್ಬಾ ಗ್ರಾಮ
ಬಂಟ್ವಾಳ ಅಂಚೆ –574211
Ph : 8904089537
Email :bcccsbantwal@gmail.com

## 4 ವಾಮದಪದವು ಶಾಖೆ

ಲಕ್ಷ್ಮಿಗಣೇಶ್ ಬಿಲ್ಡಿಂಗ್ ,
ಚೆನ್ನೈತೋಡಿ ಗ್ರಾಮ
ವಾಮದಪದವು ಅಂಚೆ , ಬಂಟ್ವಾಳ
ತಾಲೂಕು – 574324
Ph : 8904089535
Email :bcccsvamadapadav@gmail.com

## 5 ಕುಪ್ಪೆಪದವು ಶಾಖೆ

ಸಮತಾ ಕಾಂಪ್ಲೆಕ್ಸ್
ಕುಪ್ಪೆಪದವು, ಮಂಗಳೂರು –574144
Ph : 8904089531
Email : bcccskuppepadav@gmail.com

## 6 ಗುರುಪುರ ಕೈಕಂಬ ಶಾಖೆ

ಪೊಂಪೈ ಕಾಂಪ್ಲೆಕ್ಸ್, 1ನೇ ಮಹಡಿ,
ಮುಳೂರು ಗ್ರಾಮ, ಕಿನ್ನಿಕಂಬಳ ಅಂಚೆ,
ಮಂಗಳೂರು–574151
Ph : 0824–2258882
Email :bcccsgurpk@gmail.com

## 7 ಸಿದ್ಧಕಟ್ಟೆ ಶಾಖೆ

ಮಂಜರಾ ಕಾಂಪ್ಲೆಕ್ಸ್
ಕುಕ್ಕಿಪಾಡಿ ಗ್ರಾಮ, ಸಿದ್ದಕಟ್ಟೆ ಅಂಚೆ
ಬಂಟ್ವಾಳ ತಾಲೂಕು–574237
Ph : 08255–269026
Email : bcccssiddakatte@gmail.com

## 8 ಬೋಳಿಯಾರ್ ಶಾಖೆ

ಅಮರ್ ದೀಪ್ ಕಾಂಪ್ಲೆಕ್ಸ್
ಮೊದಲನೇ ಮಹಡಿ,
ಮುಖ್ಯರಸ್ತೆ ಬೋಳಿಯಾರ್ ಗ್ರಾಮ
ಮಂಗಳೂರು–574153
Ph :8904089533
Email : bcccsboliyar@gmail.com

## 9 ಕಲ್ಲಡ್ಕ ಶಾಖೆ

ನಾರಾಯಣಕೃಪಾ ಬಿಲ್ಡಿಂಗ್
ಮೊದಲನೇ ಮಹಡಿ
ಪುಷ್ಪರಾಜ್ ಆಸ್ಪತ್ರೆ ಹತ್ತಿರ, ಮುಖ್ಯರಸ್ತೆ
ಬಾಳ್ತಿಲ ಗ್ರಾಮ, ಕಲ್ಲಡ್ಕ ಅಂಚೆ
ಬಂಟ್ವಾಳ–574222
Ph : 8904089532
Email : bcccskalladka@gmail.com

# ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ರಿಜಿಸ್ಟರ್ ನಂಬ್ರ 13754 / 97-98

ರೋಯಲ್ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮುಖ್ಯ ರಸ್ತೆ, ಬಿ. ಸಿ. ರೋಡ್, ಜೋಡುಮಾರ್ಗ, ಬಂಟ್ವಾಳ ತಾಲೂಕು - 574 219

## 2023-24ನೇ ಸಾಲಿನ ವಾರ್ಷಿಕ ಮಹಾಸಭೆ

ಮಾನ್ಯ ಸದಸ್ಯರೇ,

ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ 2023-24ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ದಿನಾಂಕ **07-09-2024ರಂದು ಶನಿವಾರ ಪೂರ್ವಾಹ್ನ ಗಂಟೆ 11:00ಕ್ಕೆ** ಸರಿಯಾಗಿ **'ಸ್ಪರ್ಶಾ ಕಲಾ ಮಂದಿರ' ಬಿ.ಸಿ.ರೋಡು ಜೋಡುಮಾರ್ಗ ಉದ್ಯಾನವನದ ಬಳಿ** ಸಂಘದ ಅಧ್ಯಕ್ಷರಾದ ಜೀವನ್ ಲೋಯ್ಡ್ ಪಿಂಟೊ ಇವರ ಅಧ್ಯಕ್ಷತೆಯಲ್ಲಿ ಜರುಗಲಿರುವುದು. ಸಂಘದ ಸರ್ವ ಸದಸ್ಯರು ಸಕಾಲದಲ್ಲಿ ಹಾಜರಾಗಿ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

ಸಹಿ/-

**ಶ್ರೀಮತಿ ಸೆಲಿನ್ ಗ್ರೇಸಿ ಡಿಸೋಜ**

ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸ್ಥಳ : ಜೋಡುಮಾರ್ಗ

ತಾರೀಕು : 26-07-2024

## ಕಾರ್ಯಸೂಚಿ


| | | ಪುಟ ಸಂಖ್ಯೆ |
|---|---|---|
| 1. | ಪ್ರಾರ್ಥನೆ. | |
| 2. | ಸ್ವಾಗತ | |
| 3. | ವಾರ್ಷಿಕ ಮಹಾಸಭೆಯ ನೋಟೀಸನ್ನು ಓದಿ ದೃಢೀಕರಿಸುವುದು | 3 |
| 4. | 2022-23ನೇ ಸಾಲಿನ ಮಹಾಸಭೆಯ ನಡವಳಿಗಳನ್ನು ಓದಿ ದಾಖಲಿಸುವುದು. | 4-5 |
| 5. | 2023-24ನೇ ಸಾಲಿನ ವಾರ್ಷಿಕ ಆಡಳಿತ ವರದಿ ಮಂಡನೆ ಮತ್ತು ಅಂಗೀಕಾರ. | 6-16 |
| 6. | 2023-24ನೇ ಸಾಲಿನ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಮಂಡನೆ ಮತ್ತು ಅಂಗೀಕಾರ | 21-26 |
| 7. | 2023-24ನೇ ಸಾಲಿನ ಬಜೆಟ್ ಮೀರಿದ ಖರ್ಚುಗಳನ್ನು ಮಂಜೂರು ಮಾಡುವುದು. | 18 |
| 8. | 2023-24ನೇ ಸಾಲಿನ ಬಳಸಿದ ನಿಧಿಗಳನ್ನು ಮಂಜೂರು ಮಾಡುವುದು. | 9-10 |
| 9. | 2023-24ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳಿಗೆ ಸಂಬಂಧಿಸಿದ ನ್ಯೂನತೆಗಳಿಗೆ ಸಮಜಾಯಿಸಿಕೆ | 19 |
| 10. | 2023-24ನೇ ಸಾಲಿನ ನಿವ್ವಳ ಲಾಭವನ್ನು ಸಂಘದ ಉಪನಿಯಮದಂತೆ ವಿಂಗಡಿಸುವುದು ಮತ್ತು ಪಾಲು ಮುನಾಫೆ ಮಂಜೂರು ಮಾಡುವುದು. | 18 |
| 11. | 2024-25ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿ ಮಂಜೂರು ಮಾಡುವುದು. | 20 |
| 12. | 2024-25ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕಾತಿ. | 15 |
| 13. | ಉಪವಿಧಿ ತಿದ್ದುಪಡಿಯ ಕುರಿತು. | 19 |
| 14. | ಮುಂದಿನ ಯೋಜನೆಗಳನ್ನು ಮಂಜೂರು ಮಾಡುವುದು. | 16 |
| 15. | ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು | |
| 16. | ವಂದನಾರ್ಪಣೆ | |
| 17. | ರಾಷ್ಟ್ರಗೀತೆ | |
| 18. | ಸಹಭೋಜನ | |


**ವಿ. ಸೂ**

1. **ಮಹಾಸಭೆಯಲ್ಲಿ ಭಾಗವಹಿಸಲು ಸಂಘದ ಸದಸ್ಯರಿಗೆ ಮಾತ್ರ ಅವಕಾಶ.**
2. **ಹಾಜರಾತಿ ದಾಖಲಾತಿ ಸಂದರ್ಭದಲ್ಲಿ ನೋಟೀಸು ಅಥವಾ ಸದಸ್ಯರ ಗುರುತಿನ ಚೀಟಿ (ID Card) ದಾಖಲೆಯನ್ನು ಹಾಜರುಪಡಿಸತಕ್ಕದ್ದು.**
3. **ಹಾಜರಾತಿ ದಾಖಲಿಸಲು ಅಪರಾಹ್ನ ಗಂಟೆ 12:30ರ ವರೆಗೆ ಮಾತ್ರ ಕೌಂಟರ್ ತೆರೆದಿರುತ್ತದೆ. ಆದ್ದರಿಂದ ಸದಸ್ಯರು ಕ್ಲಪ್ತ ಸಮಯಕ್ಕೆ ಬಂದು ಹಾಜರಾತಿ ಪಡೆಯುವುದು.**

# ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ರೋಯಲ್ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮುಖ್ಯ ರಸ್ತೆ , ಬಿ. ಸಿ. ರೋಡ್ , ಜೋಡುಮಾರ್ಗ, ಬಂಟ್ವಾಳ ತಾಲೂಕು - 574 219

## 2022-2023ನೇ ಸಾಲಿನ ಮಹಾಸಭೆಯ ನಡವಳಿಗಳು

ದಿನಾಂಕ 24-09-2023 ಆದಿತ್ಯವಾರ ಬೆಳಿಗ್ಗೆ ಗಂಟೆ 11.00ಕ್ಕೆ ಸರಿಯಾಗಿ ಅನುಗ್ರಹ ತ್ರಿಶತಾಬ್ದಿ ಸ್ಮಾರಕ ಸಭಾ ಭವನ ಮೊಡಂಕಾಪು ಇಲ್ಲಿ ಜರುಗಿದ ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ) ಇದರ 2022-23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನಡವಳಿಗಳು.

ಸಭೆಯ ಅಧ್ಯಕ್ಷರು : **ಶ್ರೀ ಜೀವನ್ ಲೋಯ್ಡ್ ಪಿಂಟೊ**

ಒಟ್ಟು ಹಾಜರಾತಿ : **1076**

## ಕಾರ್ಯಸೂಚಿ

| | |
|---|---|
| **1. ಪ್ರಾರ್ಥನೆ** | ಮಹಾಸಭೆಯು ಸುಸೂತ್ರವಾಗಿ ನಡೆಯಲು ಸಂಘದ ನೌಕರರು ಸರ್ವಶಕ್ತ ದೇವರ ಆಶೀರ್ವಾದವನ್ನು ಕೋರಿದರು. |
| **2. ಅಧ್ಯಕ್ಷರ ಆಸನ ಸ್ವೀಕಾರ ಹಾಗೂ ಸ್ವಾಗತ** | ಸಂಘದ ಅಧ್ಯಕ್ಷರಾದ ಶ್ರೀ ಜೀವನ್ ಲೋಯ್ಡ್ ಪಿಂಟೊ ಇವರು ಸಭೆಯ ಅಧ್ಯಕ್ಷ ಸ್ಥಾನ ಸ್ವೀಕರಿಸಿ 2022-23ನೇ ಸಾಲಿನ ವಾರ್ಷಿಕ ಮಹಾಸಭೆಗೆ ಸರ್ವ ಸದಸ್ಯರನ್ನು ಸ್ವಾಗತಿಸಿದರು. |
| **3. ವಾರ್ಷಿಕ ಮಹಾಸಭೆಯ ನೋಟೀಸನ್ನು ಓದಿ ದೃಢೀಕರಿಸುವುದು** | 2022-23ನೇ ಸಾಲಿನ ಸರ್ವ ಸದಸ್ಯರ ಸಭೆಯ ನೋಟೀಸನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸೆಲಿನ್ ಗ್ರೇಸಿ ಡಿಸೋಜರವರು ಓದಿ ಹೇಳಿದರು ಹಾಗೂ ಸರ್ವಾನುಮತದಿಂದ ದೃಢೀಕರಿಸಲಾಯಿತು. |
| **4. 2021-22ನೇ ಸಾಲಿನ ಮಹಾಸಭೆಯ ನಡವಳಿಗಳನ್ನು ಓದಿ ದಾಖಲಿಸುವುದು** | 2021-22ನೇ ಸಾಲಿನ ಮಹಾಸಭೆಯ ನಡವಳಿಗಳನ್ನು ಸರ್ವಾನುಮತದಿಂದ ದಾಖಲಿಸಲಾಯಿತು. |
| **5. 2022-23ನೇ ಸಾಲಿನ ವಾರ್ಷಿಕ ಆಡಳಿತ ವರದಿ ಮಂಡನೆ ಮತ್ತು ಅಂಗೀಕಾರ** | 2022-2023ನೇ ಸಾಲಿನ ಆಡಳಿತ ವರದಿಯನ್ನು ಮಂಡಿಸಲಾಯಿತು. ಧನ ವಿನಿಯೋಗದ ಕುರಿತು ಪ್ರಶ್ನೆಗಳನ್ನು ಕೇಳಿದ್ದು, ಅಧ್ಯಕ್ಷರು ಸೂಕ್ತ ಉತ್ತರವನ್ನು ನೀಡಿರುತ್ತಾರೆ |
| **6. 2022-23ನೇ ಸಾಲಿನ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳ ಮಂಡನೆ ಮತ್ತು ಅಂಗೀಕಾರ** | 2022-23ನೇ ಸಾಲಿನ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳ ಮಂಡನೆಯನ್ನು ಸಭೆಯಲ್ಲಿ ಮಂಡಿಸಲಾಯಿತು ಹಾಗೂ ಸರ್ವಸದಸ್ಯರು ಲೆಕ್ಕ ಪತ್ರಗಳ ಮಂಡನೆಯನ್ನು ಅನುಮೋದಿಸಿದರು. |
| **7. 2022-23ನೇ ಸಾಲಿನ ಬಜೆಟ್ ಮೀರಿದ ಖರ್ಚುಗಳನ್ನು ಮಂಜೂರು ಮಾಡುವುದು.** | 2022-23ನೇ ಸಾಲಿನ ಬಜೆಟ್‌ನಲ್ಲಿ ಕೆಲವು ವೆಚ್ಚಗಳಿಗೆ ಬಜೆಟ್ ಇರಿಸದೆ ಆದ ಖರ್ಚುಗಳ ಬಗ್ಗೆ ಸದಸ್ಯರಲ್ಲೊಬ್ಬರು ಪ್ರಶ್ನಿಸಿರುತ್ತಾರೆ.<br>ಇದಕ್ಕೆ ಉತ್ತರಿಸಿದ ಅಧ್ಯಕ್ಷರು ಬಜೆಟ್ ಮೀರಿದ ಎಲ್ಲಾ ಖರ್ಚು-ವೆಚ್ಚಗಳನ್ನು, ಸಭೆಯಲ್ಲಿ ಮಂಜೂರು ಮಾಡಲು ವಿನಂತಿಸಿದರು ಹಾಗೂ ಸರ್ವಾನುಮತದಿಂದ ಬಜೆಟ್ ಮೀರಿದ ಖರ್ಚುಗಳನ್ನು ಮಂಜೂರು ಮಾಡಲಾಯಿತು. |

| | |
|---|---|
| **8. 2022–23ನೇ ಸಾಲಿನಲ್ಲಿ ಬಳಸಿದ ನಿಧಿಗಳನ್ನು ಮಂಜೂರು ಮಾಡುವುದು.** | 2022–23ನೇ ಸಾಲಿನಲ್ಲಿ ಬಳಸಿದ ನಿಧಿಗಳನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು. |
| **9. 2022–23ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳಿಗೆ ಸಂಬಂದಿಸಿದ ನ್ಯೂನತೆಗಳಿಗೆ ಸಮಜಾಯಿಸಿಕೆ.** | 2022–23ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಸೂಚಿಸಿದ ನ್ಯೂನತೆಗಳಿಗೆ ಸಮಜಾಯಿಸಿಕೆ ವರದಿ ಬಗ್ಗೆ ಸದಸ್ಯರು ವಿವರಣೆ ಕೇಳಿರುತ್ತಾರೆ. ಈ ಬಗ್ಗೆ ಸೂಕ್ತ ಉತ್ತರವನ್ನು ಅಧ್ಯಕ್ಷರು ನೀಡಿರುತ್ತಾರೆ ಹಾಗೂ ಸಮಜಾಯಿಸಿಕೆ ವರದಿಯನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು. |
| **10. 2022–23ನೇ ಸಾಲಿನ ನಿವ್ವಳ ಲಾಭವನ್ನು ಸಂಘದ ಉಪನಿಯಮದಂತೆ ವಿಂಗಡಿಸುವುದು ಮತ್ತು ಪಾಲು ಮುನಾಫೆ ಮಂಜೂರು ಮಾಡುವುದು** | ಸದಸ್ಯರು ನಿವ್ವಳ ಲಾಭದ ವಿಂಗಡನೆ ಬಗ್ಗೆ ಹಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಅಧ್ಯಕ್ಷರು ಪ್ರತಿಕ್ರಿಯಿಸಿ ನಿಧಿಗಳ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡಿದರು. ನಂತರ 2022–23ನೇ ಸಾಲಿನ ನಿವ್ವಳ ಲಾಭವನ್ನು ಸಂಘದ ಉಪನಿಯಮದಂತೆ ವಿಂಗಡಿಸಲಾಯಿತು ಮತ್ತು 2022–23ನೇ ಸಾಲಿಗೆ ಸದಸ್ಯರಿಗೆ ಶೇ.16ರಷ್ಟು ಪಾಲು ಮುನಾಫೆ ಮಂಜೂರು ಮಾಡಲಾಯಿತು. |
| **11. 2023–24ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿ ಮಂಜೂರು ಮಾಡುವುದು.** | ಸದಸ್ಯರು 2023–24ನೇ ಸಾಲಿನ ಅಂದಾಜು ಆಯವ್ಯಯದಲ್ಲಿರಿಸಿದ ಖರ್ಚುಗಳ ಬಗ್ಗೆ ಕಾರಣಗಳನ್ನು ಕೇಳಿರುತ್ತಾರೆ. ಅಧ್ಯಕ್ಷರು ಸೂಕ್ತ ಉತ್ತರವನ್ನು ನೀಡಿರುತ್ತಾರೆ. ಸರ್ವಾನುಮತದಿಂದ 2023–24ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯನ್ನು ಮಂಜೂರು ಮಾಡಲಾಯಿತು. |
| **12. 2023–24ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ.** | 2023–2024ನೇ ಸಾಲಿನ ಲೆಕ್ಕ ಪರಿಶೋಧಕರಾಗಿ ಸಿ.ಎ. ವಿವಿಯಾನ್ ಪಿಂಟೊ ಮತ್ತು ಕಂಪೆನಿ, ಸನ್ನದು ಲೆಕ್ಕ ಪರಿಶೋಧಕರು ಮಂಗಳೂರು ಇವರನ್ನು ನೇಮಕ ಮಾಡಲಾಯಿತು. |
| **13. ಸಂಘದ ಅಧಿಕೃತ ಷೇರು ಬಂಡವಾಳ ನಿಗದಿಪಡಿಸುವ ಕುರಿತು** | ಸಂಘದ ಪಾಲು ಬಂಡವಾಳವು 2022–23ನೇ ಸಾಲಿನ ಅಂತ್ಯಕ್ಕೆ ರೂ. 3.56 ಕೋಟಿ ಇದ್ದು, ರೂ.4.00 ಕೋಟಿಗೆ ನಿಗದಿಪಡಿಸಲಾಯಿತು. |
| **14. ಉಪವಿಧಿ ಸಂಖ್ಯೆ 69(2)ತಿದ್ದುಪಡಿ ಕುರಿತು** | ಸಂಘದ ಉಪವಿಧಿ 69(2)ನ್ನು ತಿದ್ದುಪಡಿ ಮಾಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| **15. ಮುಂದಿನ ಯೋಜನೆಗಳನ್ನು ಮಂಜೂರು ಮಾಡುವುದು** | ಮುಂದಿನ ಯೋಜನೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸರ್ವಾನುಮತದಿಂದ ಮಂಜೂರು ಮಾಡಲಾಯಿತು. |
| **16. ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು** | ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳಲ್ಲಿ, ಸದಸ್ಯರು ವ್ಯವಹಾರಕ್ಕೆ ಸಂಬಂಧಿಸಿದಂತೆ ಹಾಗೂ ಇತರ ವಿವಿಧ ಪ್ರಶ್ನೆಗಳನ್ನು ಕೇಳಿರುತ್ತಾರೆ ಹಾಗೂ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ. ಸದಸ್ಯರ ಸಲಹೆ ಸೂಚನೆಗಳಿಗೆ ಅಧ್ಯಕ್ಷರು ಉತ್ತರ ನೀಡಿರುತ್ತಾರೆ. |
| **17. ವಂದನಾರ್ಪಣೆ** | ಸಂಘದ ನಿರ್ದೇಶಕರಾದ ಶ್ರೀ ವಲೇರಿಯನ್ ಬರೆಟ್ಟೊ ಇವರು ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿದ ಸರ್ವರಿಗೂ ವಂದನೆಗಳನ್ನು ಅರ್ಪಿಸಿದರು. ರಾಷ್ಟ್ರಗೀತೆ ಹಾಗೂ ಸಹಭೋಜನದೊಂದಿಗೆ 2022–23ನೇ ಸಾಲಿನ ಮಹಾಸಭೆಯು ಮುಕ್ತಾಯಗೊಂಡಿತು. |

# ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಜೋಡುಮಾರ್ಗ, ಬಿ. ಸಿ. ರೋಡ್

## 2023–2024ನೇ ಸಾಲಿನ ಆಡಳಿತ ವರದಿ

ಗೌರವಾನ್ವಿತ ಸದಸ್ಯರೇ,

1997ನೇ ಇಸವಿಯಲ್ಲಿ ಸ್ಥಾಪನೆಗೊಂಡ ಈ ಸಹಕಾರ ಸಂಘಕ್ಕೆ ಈಗ 27ರ ಹರೆಯ. ಈ ಅವಧಿಯಲ್ಲಿ ಸಂಘವು ನಿರಂತರವಾಗಿ ಪ್ರಗತಿಯಲ್ಲಿ ಸಾಗಲು ತಾವೆಲ್ಲ ಕಾರಣರಾಗಿದ್ದೀರಿ. ಸದಸ್ಯರ, ಗ್ರಾಹಕ–ಹಿತೈಷಿಗಳ ಸಹಕಾರ, ಪ್ರೋತ್ಸಾಹ, ಇಲಾಖಾ ಅಧಿಕಾರಿಗಳ ಮಾರ್ಗದರ್ಶನ ಸ್ಮರಿಸಿ, ನಮ್ಮ ಸಂಘದ 2023–24ನೇ ಸಾಲಿನ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನೂ ಸ್ವಾಗತಿಸುತ್ತಾ ಈ ಸಹಕಾರಿ ವರ್ಷದಲ್ಲಿ ಸಂಘ ಸಾಧಿಸಿದ ಪ್ರಗತಿ ಮತ್ತು ಕಾರ್ಯಕಲಾಪಗಳುಳ್ಳ ಸಂಘದ ವಾರ್ಷಿಕ ವರದಿಯನ್ನು ತಮ್ಮ ಮುಂದಿಡಲು ಸಂತೋಷಪಡುತ್ತೇವೆ.

### ಸದಸ್ಯರು ಮತ್ತು ಪಾಲು ಬಂಡವಾಳ :

ನಮ್ಮ ಸಂಘವು ದಿನಾಂಕ 01–09–1997ರಂದು ನೋಂದಾವಣೆಯಾಗಿ ದಿನಾಂಕ 31–03–1998ರಂದು 865 ಸದಸ್ಯರಿಂದ ರೂ. 6,43,210.00 ಪಾಲುಬಂಡವಾಳದಿಂದ ಸ್ಥಾಪಿಸಲ್ಪಟ್ಟ ಈ ಸಂಸ್ಥೆಯಲ್ಲಿ ದಿನಾಂಕ 31–03–2024ಕ್ಕೆ 4921 'ಎ' ವರ್ಗ ಸದಸ್ಯರು, 8110 'ಡಿ' ವರ್ಗ ಸದಸ್ಯರು ಮತ್ತು 2794 'ಸಿ' ವರ್ಗದ ಸದಸ್ಯರಿದ್ದು ಇವರ ವರ್ಗವಾರು ವಿವರ ಈ ಕೆಳಗಿನಂತಿದೆ.

| ವರ್ಗ | 31–03–2023 ರಲ್ಲಿ ಇದ್ದ ಸದಸ್ಯರು | 2023–24ನೇ ಸಾಲಿನಲ್ಲಿ ಸೇರ್ಪಡೆಯಾದ ಸದಸ್ಯರು | 2023–24ನೇ ಸಾಲಿನಲ್ಲಿ ಬಿಟ್ಟುಹೋದ ಸದಸ್ಯರು | 31–3–2024ರ ಅಂತ್ಯಕ್ಕೆ ಇದ್ದ ಸದಸ್ಯರು |
|---|---|---|---|---|
| 'ಎ' ತರಗತಿ | 4714 | 242 | 35 | 4921 |
| 'ಡಿ' ತರಗತಿ | 7618 | 509 | 17 | 8110 |
| 'ಸಿ' ತರಗತಿ | 2057 | 1174 | 437 | 2794 |

ದಿನಾಂಕ 31–03–2024 ರಂದು ಸಂಘವು ಒಟ್ಟು ರೂ. 3,76,19,780.00 ಪಾಲು ಬಂಡವಾಳ ಹೊಂದಿರುತ್ತದೆ. ಇದರ ವರ್ಗವಾರು ವಿವರ ಈ ಕೆಳಕಂಡಂತಿದೆ.

| ವಿವರಗಳು | 'ಎ' ತರಗತಿ | | 'ಡಿ' ತರಗತಿ | | 'ಸಿ' ತರಗತಿ | |
|---|---|---|---|---|---|---|
| | ಸದಸ್ಯರು | ಪಾಲು ಬಂಡವಾಳ | ಸದಸ್ಯರು | ಪಾಲು ಬಂಡವಾಳ | ಸದಸ್ಯರು | ಪಾಲು ಬಂಡವಾಳ |
| 31-03-2020 | 4214 | 2,68,08,800.00 | 5861 | 60,20,300.00 | 2031 | 40,620.00 |
| 31-03-2021 | 4307 | 2,69,44,200.00 | 6419 | 64,16,000.00 | 2176 | 43,520.00 |
| 31-03-2022 | 4438 | 2,69,46,600.00 | 6915 | 69,41,400.00 | 2332 | 46,640.00 |
| 31-03-2023 | 4714 | 2,79,02,800.00 | 7618 | 77,18,000.00 | 2057 | 41,140.00 |
| 31-03-2024 | 4921 | 2,87,98,200.00 | 8110 | 87,65,700.00 | 2794 | 55,880.00 |

ವರದಿ ಸಾಲಿನಲ್ಲಿ ಪಾಲು ಬಂಡವಾಳವು ರೂ. 19.58 ಲಕ್ಷ ಹೆಚ್ಚಳವಾಗಿದ್ದು, ಇದು ಕಳೆದ ಸಾಲಿಗಿಂತ ಶೇ.5.49ರಷ್ಟು ವೃದ್ಧಿಯಾಗಿರುತ್ತದೆ.

**ಠೇವಣಿಗಳು :**

2023–24ನೇ ಸಾಲಿನಲ್ಲಿ ರೂ.371.67 ಕೋಟಿ ಠೇವಣಿ ಸಂಗ್ರಹಿಸಲಾಗಿದೆ ಹಾಗೂ ರೂ.351.54 ಕೋಟಿ ಠೇವಣಿಯನ್ನು ಮರು ಪಾವತಿಸಲಾಗಿದೆ. ತಾ. 31–03–2024ರಂದು ಸಂಘವು ಒಟ್ಟು ರೂ.104.02 ಕೋಟಿ ಠೇವಣಿಯನ್ನು ಹೊಂದಿರುತ್ತದೆ. ಕಳೆದ ಸಾಲಿಗಿಂತ ಶೇ 23.99ರಷ್ಟು ಠೇವಣಿಯು ವೃದ್ಧಿಯಾಗಿರುತ್ತದೆ. ಸದಸ್ಯರು ಸಂಘದ ಮೇಲೆ ವಿಶ್ವಾಸವಿಟ್ಟು ಠೇವಣಿ ಮಾಡಿರುವುದರಿಂದ ಈ ವೃದ್ಧಿ ಸಾಧ್ಯವಾಗಿದೆ.

**ವಿವರಗಳು ಈ ಕೆಳಗಿನಂತಿದೆ :**

| ಕ್ರಸಂ | ಠೇವಣಿಗಳ ವಿವರಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|---|
| 1 | ನಿರಖು ಠೇವಣಿ | 44,43,59,972.00 | 50,15,95,929.00 | 58,53,99,519.00 | 69,92,59,134.00 | 89,75,71,989.00 |
| 2 | ವಿಶೇಷ ನಗದು ಠೇವಣಿ | – | – | – | – | 29,94,526.00 |
| 3 | ಸ್ವರ್ಣ ನಗದು ಠೇವಣಿ | 1,94,11,672.00 | 1,42,85,509.00 | 69,33,701.00 | 66,29,198.00 | 38,53,455.00 |
| 4 | ಆವರ್ತ ಠೇವಣಿ | 92,00,850.00 | 97,36,761.00 | 98,25,500.00 | 1,01,83,505.00 | 1,25,30.826.00 |
| 5 | ಉಳಿತಾಯ ಖಾತೆ | 5,78,83,979.93 | 6,80,57,223.74 | 7,96,77,407.56 | 8,77,00,996.82 | 8,66,27,164.80 |
| 6 | ಚಾಲ್ತಿ ಖಾತೆ | 6,796.97 | 57,306.47 | 7,00,029.67 | 8,18,223.37 | 4,32,874.97 |
| 7 | ನಿತ್ಯ ನಿಧಿ ಠೇವಣಿ | 2,20,87,609.00 | 2,38,65,245.00 | 2,75,07,460.00 | 3,01,36,061.00 | 3,16,03,291.00 |
| 8 | ಅವಧಿ ದಾಟಿದ ಠೇವಣಿ | 3,038.00 | 3,038.00 | 3,038.00 | 3038.00 | 3,038.00 |
| 9 | ಪಿಗ್ಮಿ ಏಜೆಂಟ್ ಭದ್ರತಾ ಠೇವಣಿ | 15,46,634.00 | 18,00,297.00 | 19,42,696.00 | 21,86,070.00 | 25,43,282.00 |
| 10 | ಸರಾಫರ ಭದ್ರತಾ ಠೇವಣಿ | 5,64,737.00 | 6,43,687.00 | 7,69,069.00 | 7,58,107.00 | 8,44,152.00 |
| 11 | ನೌಕರರ ಭದ್ರತಾ ಠೇವಣಿ | 10,74,349.00 | 10,87,373.00 | 11,15,418.00 | 12,23,446.00 | 11,80,578.00 |
| | **ಒಟ್ಟು** | **55,61,39,637.90** | **62,11,32,369.21** | **71,38,73,838.23** | **83,88,97,779.19** | **1,04,01,85,176.77** |



**ಸದಸ್ಯರ ಸಾಲಗಳು :**

2023–24ನೇ ಸಾಲಿನಲ್ಲಿ ಒಟ್ಟು ರೂ. 164.30 ಕೋಟಿ ಸಾಲವನ್ನು ಸದಸ್ಯರಿಗೆ ನೀಡಲಾಗಿದೆ ಹಾಗೂ ರೂ. 142.35 ಕೋಟಿ ಸಾಲವನ್ನು ವಸೂಲು ಮಾಡಲಾಗಿದೆ. 2023–24 ಸಾಲಿನಲ್ಲಿ ಶೇಕಡಾ 97.09 ರಷ್ಟು ಸಾಲ ವಸೂಲಿಯಾಗಿರುತ್ತದೆ ಎಂದು ಹೇಳಲು ಸಂತೋಷವಾಗುತ್ತಿದೆ. ದಿನಾಂಕ 31–03–2024 ರಂದು ಹೊರಬಾಕಿ ಸಾಲ ರೂ. 89.60 ಕೋಟಿ ಇರುತ್ತದೆ. ಕಳೆದ ಸಾಲಿಗಿಂತ ಶೇಕಡಾ 32.43 ರಷ್ಟು ವೃದ್ಧಿಯಾಗಿದೆ.

**ವಿವರಗಳು ಈ ಕೆಳಗಿನಂತಿದೆ :**

| ಕ್ರ.ಸಂ | ಸಾಲಗಳ ವಿವರ | 2019–20 | 2020–21 | 2021–22 | 2022–23 | 2023–24 |
|---|---|---|---|---|---|---|
| 1 | ಗೃಹ ನಿರ್ಮಾಣ ಸಾಲ | 11,20,38,296.50 | 11,60,90,671.93 | 11,41,40,050.93 | 12,43,21,835.93 | 13,36,65,261.43 |
| 2 | ವಾಹನ ಸಾಲ | 3,72,68,890.45 | 3,95,80,305.45 | 3,66,44,814.37 | 3,85,09,824.42 | 3,88,31,931.74 |
| 3 | ಚಿನ್ನಾಭರಣ ಸಾಲ | 18,01,74,272.00 | 23,04,35,566.00 | 27,61,98,453.00 | 35,52,57,082.06 | 52,53,27,627.89 |
| 4 | ಠೇವಣಿ ಆಧಾರಿತ ಸಾಲ | 1,30,59,730.00 | 92,80,445.00 | 82,63,078.00 | 1,28,43,796.00 | 2,13,07,697.00 |
| 5 | ಅಡಮಾನ ಸಾಲ | 9,51,54,799.00 | 9,48,25,698.00 | 10,67,55,919.00 | 12,31,18,794.00 | 14,86,11,201.00 |
| 6 | ಭದ್ರತಾ ಸಾಲ | 4,27,632.00 | 2,89,227.00 | 1,87,728.00 | 73,317.00 | 3,19,996.00 |
| 7 | ಸ್ವ–ಉದ್ಯೋಗ ಸಾಲ | 45,24,893.00 | 49,20,809.92 | 61,34,701.00 | 73,44,219.00 | 62,20,280.00 |
| 8 | ಜಾಮೀನು ಸಾಲ | 1,53,78,867.50 | 1,64,28,958.96 | 1,44,44,588.50 | 1,49,16,394.90 | 2,14,62,222.04 |
| 9 | ನೌಕರರ ಸಾಲ | 1,94,711.00 | 5,41,200.00 | 3,94,454.00 | 2,61,816.00 | 3,49,087.00 |
| 10 | ಮೀರೆಳೆತ ಸಾಲ | 11,52,353.00 | 10,15,114.00 | 26,08,897.00 | – | – |
| | **ಒಟ್ಟು** | **45,93,74,444.45** | **51,34,07,996.26** | **56,57,72,683.80** | **67,66,47,079.31** | **89,60,95,304.10** |




ಸಾಲ ಪಡೆದು ಸಕಾಲದಲ್ಲಿ ಮರುಪಾವತಿಸಿದ ಎಲ್ಲಾ ಸಾಲಗಾರ ಸದಸ್ಯರಿಗೆ ಹೃದಯಸ್ಪರ್ಶಿ ಕೃತಜ್ಞತೆಗಳು ಹಾಗೂ ಸಾಲ ಪಡಕೊಂಡ ಎಲ್ಲಾ ಸದಸ್ಯರು ಕ್ರಮಬದ್ಧವಾಗಿ ಸಾಲವನ್ನು ಕ್ಲಪ್ತ ಸಮಯಕ್ಕೆ ಮರುಪಾವತಿ ಮಾಡಿ ಸಂಸ್ಥೆಗೆ ಕೀರ್ತಿ ತರಲು ಹಾಗೂ ಸಂಸ್ಥೆಯನ್ನು ಪ್ರಗತಿಯತ್ತ ಮುನ್ನಡೆಸಲು ಸಹಕರಿಸಬೇಕಾಗಿ ವಿನಂತಿಸುತ್ತೇವೆ

**ನಿಧಿಗಳು ಮತ್ತು ದುಡಿಯುವ ಬಂಡವಾಳ :**

ವರದಿ ಸಾಲಿನಲ್ಲಿ ಒಟ್ಟು ರೂ. 7,91,52,888.21 ವಿವಿಧ ನಿಧಿಗಳಿರುತ್ತವೆ. ಸಂಘದ ಕಾದಿರಿಸಿದ ನಿಧಿಯಲ್ಲಿ ಒಟ್ಟು ಮೊತ್ತ ರೂ. 3,01,78,737.00 ಜಮೆ ಇದ್ದು, ಈ ನಿಧಿಯಿಂದ ರೂ. 1,50,83,900.00 ಮೊತ್ತವನ್ನು ಹಿಂಪಡೆದು ಸಂಘಕ್ಕೆ ಸ್ವಂತ ನಿವೇಶನ ಖರೀದಿಗಾಗಿ ಉಪಯೋಗಿಸಲಾಗಿದೆ. ಇದಕ್ಕಾಗಿ ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು ಇವರ ಆದೇಶ ನಂಬ್ರ ಆರ್‌ಸಿಎಸ್/ಯುಬಿಸಿ–5/304/ನಿ.ಖ.ಅ/2023–24 ಪ್ರಕಾರ ಅನುಮತಿ ಪಡೆಯಲಾಗಿದೆ. ಈ ಆದೇಶದ ಪ್ರಕಾರ ಹಿಂಪಡೆದ ಮೊತ್ತವನ್ನು 10 ವಾರ್ಷಿಕ ಸಮಾನ ಕಂತುಗಳಲ್ಲಿ ಮರುಪಾವತಿಸಲು ಶರ್ತವನ್ನು ವಿಧಿಸಲಾಗಿದೆ.

ದಿನಾಂಕ 31–3–2024ಕ್ಕೆ ಸಂಘದ ದುಡಿಯುವ ಬಂಡವಾಳ ರೂ. 114,46,93,766.85 ಆಗಿರುತ್ತದೆ. ಈ ಪ್ರಗತಿಗೆ ಸಹಕರಿಸಿದ ಎಲ್ಲಾ ಸದಸ್ಯರಿಗೂ ಸಂಘದ ಆಡಳಿತ ಮಂಡಳಿಯು ಆಭಾರಿಯಾಗಿದೆ.

**ಈಗ ಇರುವ ನಿಧಿಗಳ ವಿವರ :**

| ಕ್ರ ಸಂ | ನಿಧಿಗಳು | 31–03–2023 ರ ಶಿಲ್ಕು | ವರದಿ ಸಾಲಿನಲ್ಲಿ ಜಮಾ | ವರದಿ ಸಾಲಿನಲ್ಲಿ ಉಪಯೋಗ | 31–03–2024 ರ ಶಿಲ್ಕು |
|---|---|---|---|---|---|
| 1 | ಕಾದಿರಿಸಿದ ನಿಧಿ | 2,54,97,964.00 | 46,80,773.00 | 1,50,83,900.00 | 1,50,94,837.00 |
| 2 | ಸದಸ್ಯರ ಕಲ್ಯಾಣ ನಿಧಿ | 23,49,107.00 | 6,00,000.00 | 10,000.00 | 29,39,107.00 |
| 3 | ನೌಕರರ ಕಲ್ಯಾಣ ನಿಧಿ | 7,73,640.04 | 3,00,000.00 | 50,000.00 | 10,23,640.04 |
| 4 | ಕರಡು ಸಾಲದ ನಿಧಿ | 31,81,000.00 | 8,13,500.00 | – | 39,94,500.00 |
| 5 | ಧಾರ್ಮಿಕ ನಿಧಿ | 18,000.00 | – | – | 18,000.00 |
| 6 | ಸಾರ್ವಜನಿಕ ಉಪಕಾರ ನಿಧಿ | 9,050.00 | – | 5,000.00 | 4,050.00 |
| 7 | ಸಾಮಾನ್ಯ ನಿಧಿ | 12,99,500.00 | 5,00,000.00 | 5,000.00 | 17,94,500.00 |
| 8 | ಗ್ರಾಚ್ಯುವಿಟಿ ನಿಧಿ | 35,61,482.57 | 7,63,230.64 | 10,12,259.43 | 33,12,453.78 |
| 9 | ಜಾಹಿರಾತು ನಿಧಿ | 3,81,500.00 | 1,00,000.00 | 32,000.00 | 4,49,500.00 |
| 10 | ಜ್ಯುಬಿಲಿ ನಿಧಿ | 5,09,943.58 | 1,00,000.00 | – | 6,09,943.58 |
| 11 | ಕಟ್ಟಡ ನಿಧಿ | 1,34,39,424.99 | 25,00,000.00 | – | 1,59,39,424.99 |
| 12 | ಸವಕಳಿ ನಿಧಿ | 1,27,08,468.12 | 18,14,652.57 | 14,500.00 | 1,45,08,620.69 |
| 13 | ನಷ್ಟ ಪರಿಹಾರ ನಿಧಿ | 23,20,000.00 | 20,00,000.00 | – | 43,20,000.00 |
| 14 | ಲಾಭಾಂಶ ಸಮೀಕರಣ ನಿಧಿ | 15,065.61 | 45,345.52 | – | 60,411.13 |
| | | **6,60,64,145.91** | **1,42,17,501.73** | **1,62,12,659.43** | **6,40,68,988.21** |

## ಉಪಯೋಗಿಸಿದ ನಿಧಿಗಳ ವಿವರ :

**1. ಸದಸ್ಯರ ಕಲ್ಯಾಣ ನಿಧಿ :**

* ಶ್ರೀ ಲೂವಿಸ್ ವೇಗಸ್, ಮೊಡಂಕಾಪು ಸದಸ್ಯ ನಂಬ್ರ 204 ಇವರ ಮಗಳ ವಿದ್ಯಾಭ್ಯಾಸಕ್ಕಾಗಿ ನೀಡಿದ ಆರ್ಥಿಕ ಸಹಾಯಧನ ರೂ. 10,000/–

**2. ನೌಕರರ ಕಲ್ಯಾಣ ನಿಧಿ :**

* ಸಂಘದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಸಂಘದ ಇಬ್ಬರು ಸಿಬ್ಬಂದಿಗಳಿಗೆ ಸಂಘದ ಪರವಾಗಿ ನೀಡಿದ ಮೊತ್ತ ತಲಾ ಒಬ್ಬರಿಗೆ ರೂ. 25,000/–ರಂತೆ ಒಟ್ಟು ರೂ. 50,000/–

**3. ಸಾರ್ವಜನಿಕ ಉಪಕಾರ ನಿಧಿ :**

* ಸಾರ್ವಜನಿಕ ಶ್ರೀ ಶಾರದೋತ್ಸವ ಸಮಿತಿ, ವಾಮದಪದವು ಇವರಿಗೆ ಶ್ರೀ ಶಾರದಾ ಪೂಜಾ ಮಹೋತ್ಸವಕ್ಕೆ ನೀಡಿದ ಆರ್ಥಿಕ ಸಹಾಯಧನ ರೂ. 5,000/–

**4. ಸಾಮಾನ್ಯ ನಿಧಿ :**

* ಕಾರ್ಮೆಲ್ ಸಂಯುಕ್ತ ಪದವಿ ಪೂರ್ವ ಕಾಲೇಜು, ಮೊಡಂಕಾಪು ಇವರಿಗೆ ಬಂಟ್ವಾಳ ತಾಲೂಕು ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟಕ್ಕೆ ನೀಡಿದ ದೇಣಿಗೆ ರೂ. 5,000/–

**5. ಗ್ರಾಚ್ಯುವಿಟಿ ನಿಧಿ :**

* ಸಂಘದಲ್ಲಿ ನಿವೃತ್ತಿ ಹೊಂದಿದ ಸಿಬ್ಬಂದಿಗಳಿಗೆ ನೀಡಿದ ಗ್ರಾಚ್ಯುವಿಟಿ ಮೊತ್ತ ಹಾಗೂ ವಾರ್ಷಿಕ ಗ್ರಾಚ್ಯುವಿಟಿ ಪಾಲಿಸಿಯ ನವೀಕರಣ ಖರ್ಚು ರೂ. 10,12,259.43

**6. ಜಾಹೀರಾತು ನಿಧಿ :**

* ಸೇಕ್ರೆಡ್ ಹಾರ್ಟ್ ಆಫ್ ತೊಡಂಬಿಲ ಚರ್ಚ್, ಕಳ್ಳಿಗೆ ಇದರ ಚರ್ಚ್‌ನ ವಾರ್ಷಿಕ ಪತ್ರಿಕೆಯ ಸಂಚಿಕೆಗೆ ಸಂಘದ ಜಾಹೀರಾತು ಪ್ರಕಟಿಸಲು ನೀಡಿದ ಮೊತ್ತ ರೂ. 10,000/–
* ಸೈಂಟ್ ಪ್ಯಾಟ್ರಿಕ್ ಆಂಗ್ಲ ಮಾಧ್ಯಮಶಾಲೆ, ಸಿದ್ಧಕಟ್ಟೆ ಇದರ ದಶಮಾನೋತ್ಸವದ ಪ್ರಯುಕ್ತ ಬಿಡುಗಡೆಗೊಳಿಸಿದ ಸ್ಮರಣ ಸಂಚಿಕೆಗೆ ಸಂಘದ ಜಾಹೀರಾತು ಪ್ರಕಟಿಸಲು ನೀಡಿದ ಮೊತ್ತ ರೂ. 5000/–
* ಸೈಂಟ್ ಜೋನ್ ಮರಿಯ ವಿಯಾನ್ನಿ, ಬಾಂಬಿಲ ಇದರ ಬೆಳ್ಳಿಹಬ್ಬದ ಪ್ರಯುಕ್ತ ಬಿಡುಗಡೆಗೊಳಿಸಿದ ಸ್ಮರಣ ಸಂಚಿಕೆಗೆ ಸಂಘದ ಜಾಹೀರಾತು ಪ್ರಕಟಿಸಲು ನೀಡಿದ ಮೊತ್ತ ರೂ. 7000/–
* ಇನ್ಫೆಂಟ್ ಜೇಸಸ್ ಚರ್ಚ್, ಕರಿಮಲೆ, ವಾಮದಪದವು ಇವರು ಬಿಡುಗಡೆಗೊಳಿಸಿದ ಪತ್ರಿಕೆಗೆ ಸಂಘದ ಜಾಹೀರಾತು ಪ್ರಕಟಿಸಲು ನೀಡಿದ ಮೊತ್ತ ರೂ. 5000/–
* ಇಮ್ಯಾಕ್ಯುಲೇಟ್ ಹಾರ್ಟ್ ಆಫ್ ಮೇರಿ ಚರ್ಚ್ ಇದರ ವಾರ್ಷಿಕ ಪತ್ರಿಕೆಯ ಸಂಚಿಕೆಗೆ ಸಂಘದ ಜಾಹೀರಾತು ಪ್ರಕಟಿಸಲು ನೀಡಿದ ಮೊತ್ತ ರೂ. 5000/–

## ಇತರ ಬ್ಯಾಂಕಿನ ಸಾಲಗಳು:

ಸಂಸ್ಥೆಯು ಇತರ ಬ್ಯಾಂಕಿನಲ್ಲಿ ಇಟ್ಟಿರುವ ನಿರಖು ಠೇವಣಿ ಆಧಾರದಲ್ಲಿ ಅಗತ್ಯದ ವೇಳೆಯಲ್ಲಿ ಒಟ್ಟು ರೂ. 82.73 ಲಕ್ಷ ಸಾಲ ಪಡೆದಿದ್ದು, ಸಂಪೂರ್ಣವಾಗಿ ಮರುಪಾವತಿ ಮಾಡಲಾಗಿದೆ. 31–03–2024 ರಂದು ಯಾವುದೇ ಬ್ಯಾಂಕಿನ ಸಾಲ ಬಾಕಿ ಇರುವುದಿಲ್ಲ. ಸಂಘದ ಸದಸ್ಯರಿಂದ ಪಡೆದ ಠೇವಣಿಗಳು ಮತ್ತು ಪಾಲು ಬಂಡವಾಳದಿಂದ ಮಾತ್ರ ವ್ಯವಹಾರ ಮಾಡಲಾಗಿದೆ. ಇನ್ನು ಮುಂದೆ ಕೂಡಾ ಸಂಘದ ಎಲ್ಲಾ ಸದಸ್ಯರು ವ್ಯವಹಾರದಲ್ಲಿ ಸಕ್ರೀಯವಾಗಿ ಭಾಗವಹಿಸಲು ಹಾಗೂ ಹೆಚ್ಚಿನ ಠೇವಣಿ ಹೂಡಿ ಸಂಸ್ಥೆಯು ಸ್ವಾವಲಂಬಿಯಾಗಿ ಸ್ವಂತ ಬಂಡವಾಳದಿಂದ ಮಾತ್ರ ವ್ಯವಹಾರ ನಡೆಸುವಂತಾಗಲು ಸಹಕಾರ ನೀಡಬೇಕಾಗಿ ವಿನಂತಿಸುತ್ತೇವೆ.

**ವಿನಿಯೋಗಗಳು :**

31-03-2024ರ ಅಂತ್ಯಕ್ಕೆ ಸಂಘದಲ್ಲಿರುವ ಒಟ್ಟು ವಿನಿಯೋಗಗಳು ರೂ.25,54,82,871.00 ಆಗಿರುತ್ತದೆ. ವಿವರಗಳು ಈ ಕೆಳಕಂಡಂತಿದೆ.

**ರೂ. ಲಕ್ಷಗಳಲ್ಲಿ**

| | |
|---|---|
| ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಮಂಗಳೂರು (ಪಾಲುಬಂಡವಾಳ) | 0.79 |
| ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು, (ರಿಸರ್ವ್ ಫಂಡ್) | 150.95 |
| ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು, ಬಿ.ಸಿ.ರೋಡ್ ಶಾಖೆ | 334.04 |
| ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು, ಬಂಟ್ವಾಳ ಶಾಖೆ | 25.00 |
| ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು, ಫರಂಗಿಪೇಟೆ ಶಾಖೆ | 130.00 |
| ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು, ಗುರುಪುರ ಕೈಕಂಬ ಶಾಖೆ | 31.02 |
| ಅಮ್ಟಾಡಿ ವ್ಯವಸಾಯ ಸೇವಾ ಸಹಕಾರಿ ಸಂಘ ನಿ. ಅಮ್ಟಾಡಿ ಶಾಖೆ | 50.00 |
| ಆತ್ಮಶಕ್ತಿ ವಿವಿದೋದ್ಧೇಶ ಸಹಕಾರಿ ಸಂಘ ನಿ. ಬಿ.ಸಿ.ರೋಡ್ ಶಾಖೆ | 30.00 |
| ಬಂಟ್ವಾಳ ವರ್ತಕರ ವಿವಿದೋದ್ಧೇಶ ಸಹಕಾರಿ ಸಂಘ ನಿ. ಬಿ.ಸಿ.ರೋಡ್ ಶಾಖೆ | 25.00 |
| ಕುಂಬಾರರ ಗುಡಿ ಕೈಗಾರಿಕಾ ಸಹಕಾರಿ ಸಂಘ ನಿ. ಬಿ.ಸಿ.ರೋಡ್ ಶಾಖೆ | 40.00 |
| ಕುಂಬಾರರ ಗುಡಿ ಕೈಗಾರಿಕಾ ಸಹಕಾರಿ ಸಂಘ ನಿ. ಫರಂಗಿಪೇಟೆ ಶಾಖೆ | 5.00 |
| ಸಮಾಜ ಸೇವಾ ಸಹಕಾರಿ ಸಂಘ, ಫರಂಗಿಪೇಟೆ ಶಾಖೆ | 528.08 |
| ಸಮಾಜ ಸೇವಾ ಸಹಕಾರಿ ಸಂಘ, ಮೆಲ್ಕಾರ್ ಶಾಖೆ | 10.00 |
| ಸಮಾಜ ಸೇವಾ ಸಹಕಾರಿ ಸಂಘ, ಬಂಟ್ವಾಳ ಶಾಖೆ | 144.95 |
| ಸಮಾಜ ಸೇವಾ ಸಹಕಾರಿ ಸಂಘ, ಉಪ್ಪಿನಂಗಡಿ ಶಾಖೆ | 10.00 |
| ಶ್ರೀ ಭಗವತಿ ಸಹಕಾರ ಬ್ಯಾಂಕ್ ನಿ. ಬಿ.ಸಿ.ರೋಡ್ ಶಾಖೆ | 155.00 |
| ಶ್ರೀ ಗುರುದೇವ ವಿವಿಧ್ದೋದ್ದೇಶ ಸಂಘ ಸಹಕಾರಿ ನಿ. | 75.00 |
| ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ನಿ. ಬಿ.ಸಿರೋಡ್ ಶಾಖೆ | 175.00 |
| ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ನಿ. ಮುಡಿಪು ಶಾಖೆ | 25.00 |
| ಸುಮಂಗಲಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ನಿ, ಪಾಣೆಮಂಗಳೂರು ಶಾಖೆ | 265.00 |
| ಟೀಚರ್ಸ್ ಕೋ-ಅಪರೇಟಿವ್ ಸೊಸೈಟಿ ನಿ. ಬಿ.ಸಿರೋಡ್ ಶಾಖೆ | 50.00 |
| ವೆಂಕಟರಮಣ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ನಿ, ಬಿ.ಸಿ. ರೋಡ್ ಶಾಖೆ | 175.00 |
| ವಿಕಾಸ ವಿವಿದೋದ್ಧೇಶ ಸಹಕಾರಿ ಸಂಘ ನಿ. ಬಿ.ಸಿ.ರೋಡ್ ಶಾಖೆ | 50.00 |
| ವಿಜಯ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ನಿ, ಬಿ.ಸಿ. ರೋಡ್ ಶಾಖೆ | 70.00 |
| **ಒಟ್ಟು** | **2554.83** |

ಸಂಘವು ಮೇಲೆ ಕಾಣಿಸಿದ ನಿರಖು ಠೇವಣಿಯಲ್ಲದೆ ದೈನಂದಿನ ವ್ಯವಹಾರಕ್ಕಾಗಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಬಿ.ಸಿ.ರೋಡು, ಬಂಟ್ವಾಳ, ಫರಂಗಿಪೇಟೆ, ಕುಪ್ಪೆಪದವು, ಗುರುಪುರ ಕೈಕಂಬ, ಸಿದ್ಧಕಟ್ಟೆ, ಬೋಳಿಯಾರ್ ಹಾಗೂ ಕಲ್ಲಡ್ಕ, ಶ್ರೀ ಭಗವತಿ ಸಹಕಾರ. ಬ್ಯಾಂಕು ಬಿ.ಸಿ.ರೋಡ್, ಗುರುಪುರ ಕೈಕಂಬ, MCC ಬ್ಯಾಂಕು ಬಿ.ಸಿ.ರೋಡ್, ಕೆನರಾ ಬ್ಯಾಂಕ್ ಬಿ.ಸಿ.ರೋಡ್, ಫರಂಗಿಪೇಟೆ, ವಾಮದಪದವು, ಗುರುಪುರ ಕೈಕಂಬ ಮತ್ತು ಬೋಳಿಯಾರ್, ಸಮಾಜ ಸೇವಾ ಸಹಕಾರಿ ಸಂಘ ಫರಂಗಿಪೇಟೆ, ಬಂಟ್ವಾಳ, ಬ್ಯಾಂಕ್ ಆಫ್ ಬರೋಡಾ ಕುಪ್ಪೆಪದವು ಮತ್ತು ಸಿದ್ಧಕಟ್ಟೆ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಬಿ.ಸಿ.ರೋಡು ಮತ್ತು ಬಂಟ್ವಾಳ, ಕರ್ನಾಟಕ ಬ್ಯಾಂಕ್ ಕಲ್ಲಡ್ಕ, ವಾಮದಪದವು, ಭಾರತ್ ಕೋ ಅಪರೇಟಿವ್ ಬ್ಯಾಂಕ್ ಲಿ. ಬಿ.ಸಿ.ರೋಡ್, ಐ.ಸಿ.ಐ.ಸಿ.ಐ ಬ್ಯಾಂಕ್ ಬಂಟ್ವಾಳ ಇಲ್ಲಿ ದೈನಂದಿನ ವ್ಯವಹಾರ ನಡೆಸುತ್ತಿದೆ. ಎಲ್ಲಾ ಬ್ಯಾಂಕುಗಳ ಉಳಿತಾಯ ಮತ್ತು ಚಾಲ್ತಿ ಖಾತೆಗಳಲ್ಲಿ 31-03-2024 ರಂದು ಒಟ್ಟು ರೂ. 297.37 ಲಕ್ಷ ಇರುತ್ತದೆ.

**ಸ್ಥಿರ–ಚರ ಸೊತ್ತುಗಳು :**

ಸಂಘದ ಪ್ರಧಾನ ಕಛೇರಿ ಬಿ.ಸಿ.ರೋಡ್ ಮತ್ತು ಫರಂಗಿಪೇಟೆ ಶಾಖೆಯು ಸ್ವಂತ ಕಟ್ಟಡವನ್ನು ಹೊಂದಿರುತ್ತದೆ. ಸದ್ರಿ ಎರಡೂ ಕಟ್ಟಡಗಳು ರೂ.96.67 ಲಕ್ಷದಷ್ಟು ಬೆಲೆ ಬಾಳುತ್ತದೆ. ಸಂಘವು ಹೊಸ ನಿವೇಶನವನ್ನು ಖರೀದಿಸಿದ್ದು, ಇದರ ಮೌಲ್ಯವು ರೂ.151.33 ಲಕ್ಷದಷ್ಟು ಆಗಿರುತ್ತದೆ. ಹೀಗೆ ಸಂಘದ ಒಟ್ಟು ಸ್ಥಿರಾಸ್ತಿ ಮೌಲ್ಯವು ರೂ.248 ಲಕ್ಷ ಆಗಿರುತ್ತದೆ. ಇದು ಒಟ್ಟು ದುಡಿಯುವ ಬಂಡವಾಳದ ಶೇ. 2.17ರಷ್ಟು ಇರುತ್ತದೆ. ಹಾಗೂ ಇದರೊಂದಿಗೆ ರೂ. 85.53 ಲಕ್ಷದಷ್ಟು ಇತರ ಎಲ್ಲಾ ಚರ ಸೊತ್ತುಗಳು ಇರುತ್ತವೆ. ಇತರ ಚರ ಸೊತ್ತುಗಳು ದುಡಿಯುವ ಬಂಡವಾಳದ ಶೇ. 0.75ರಷ್ಟು ಇರುತ್ತದೆ. ಒಟ್ಟು ಸ್ಥಿರ ಚರ ಸೊತ್ತುಗಳು ದುಡಿಯುವ ಬಂಡವಾಳದ ಶೇ. 2.92ರಷ್ಟು ಇರುತ್ತದೆ. ಎಲ್ಲಾ ಸ್ಥಿರ ಚರ ಸೊತ್ತುಗಳಿಗೆ ವಿಮೆ ಮಾಡಲಾಗಿದೆ.

**ಶಾಖೆಗಳು :**

ಸಂಘವು ಪ್ರಸ್ತುತ ಬಿ.ಸಿ.ರೋಡು, ಫರಂಗಿಪೇಟೆ, ಬಂಟ್ವಾಳ, ವಾಮದಪದವು, ಕುಪ್ಪೆಪದವು, ಗುರುಪುರ ಕೈಕಂಬ, ಸಿದ್ಧಕಟ್ಟೆ, ಬೋಳಿಯಾರ್ ಮತ್ತು ಕಲ್ಲಡ್ಕ, ಒಟ್ಟು 09 ಶಾಖೆಗಳನ್ನು ಹೊಂದಿದೆ. ಹೊಸ ಶಾಖೆಯು ಫಜೀರು ಗ್ರಾಮದ ಗ್ರಾಮಚಾವಡಿಯಲ್ಲಿ ತೆರೆಯಲು ಸಿದ್ಧತೆ ನಡೆಯುತ್ತಿದೆ. ಎಲ್ಲಾ ಶಾಖೆಗಳು ಉತ್ತಮವಾಗಿ ಕಾರ್ಯವೆಸಗುತ್ತಿವೆ. ಎಲ್ಲಾ ಶಾಖೆಗಳು ಗಣಕೀಕೃತಗೊಂಡಿರುತ್ತವೆ.

| **ಶಾಖೆಗಳು** | **ಠೇವಣಿಗಳು** | | |
|---|---|---|---|
| | **31–03–2023ಕ್ಕೆ (ರೂ ಲಕ್ಷಗಳಲ್ಲಿ)** | **31–03–2024ಕ್ಕೆ (ರೂ ಲಕ್ಷಗಳಲ್ಲಿ)** | **ವೃದ್ಧಿ (ಶೇ.)** |
| ಬಿ ಸಿ ರೋಡ್ | 30,44,08,108.68 | 38,26,62,451.14 | 25.71 |
| ಫರಂಗಿಪೇಟೆ | 10,10,38,677.56 | 11,90,44,923.41 | 17.82 |
| ಬಂಟ್ವಾಳ | 22,37,55,898.18 | 26,41,10,900.97 | 18.04 |
| ವಾಮದಪದವು | 6,58,51,978.79 | 7,82,89,499.36 | 18.89 |
| ಕುಪ್ಪೆಪದವು | 3,51,37,479.13 | 3,78,71,339.27 | 7.78 |
| ಗುರುಪುರ ಕೈಕಂಬ | 3,63,10,155.18 | 5,42,69,330.43 | 49.46 |
| ಸಿದ್ಧಕಟ್ಟೆ | 3,23,62,546.02 | 3,98,23,915.10 | 23.06 |
| ಬೋಳಿಯಾರ್ | 1,67,83,617.03 | 2,78,35,163.81 | 65.82 |
| ಕಲ್ಲಡ್ಕ | 1,90,81,695.62 | 3,17,09,641.28 | 66.18 |
| ಪ್ರಧಾನ ಕಚೇರಿ | 41,67,623.00 | 45,68,012.00 | 9.61 |
| **ಒಟ್ಟು** | **83,88,97,779.19** | **1,04,01,85,176.77** | **23.99** |

| **ಶಾಖೆಗಳು** | **ಹೊರ ಬಾಕಿ ಸಾಲಗಳು** | | |
|---|---|---|---|
| | **31–03–2023ಕ್ಕೆ (ರೂ ಲಕ್ಷಗಳಲ್ಲಿ)** | **31–03–2024ಕ್ಕೆ (ರೂ ಲಕ್ಷಗಳಲ್ಲಿ)** | **ವೃದ್ಧಿ (ಶೇ.)** |
| ಬಿ ಸಿ ರೋಡ್ | 14,88,97,011.93 | 15,97,81,268.97 | 7.31 |
| ಫರಂಗಿಪೇಟೆ | 16,69,67,995.00 | 21,92,67,405.00 | 31.32 |
| ಬಂಟ್ವಾಳ | 7,25,23,472.00 | 9,23,94,073.00 | 27.40 |
| ವಾಮದಪದವು | 8,57,94,881.00 | 9,42,64,391.00 | 9.87 |
| ಕುಪ್ಪೆಪದವು | 5,47,72,623.42 | 6,64,29,646.92 | 21.28 |
| ಗುರುಪುರ ಕೈಕಂಬ | 5,15,48,975.00 | 10,87,70,991.48 | 111.01 |
| ಸಿದ್ಧಕಟ್ಟೆ | 4,51,72,370.00 | 5,94,79,774.41 | 31.67 |
| ಬೋಳಿಯಾರು | 2,82,98,398.00 | 4,82,73,684.00 | 70.59 |
| ಕಲ್ಲಡ್ಕ | 2,26,72,352.06 | 4,74,34,069.32 | 109.22 |
| **ಒಟ್ಟು** | **67,66,48,079.31** | **89,60,95,304.10** | **32.43** |

**ಆಡಳಿತ ಮಂಡಳಿ :**

ವರದಿ ಸಾಲಿನಲ್ಲಿ ಅಧ್ಯಕ್ಷರು ಉಪಾಧ್ಯಕ್ಷರು ಸೇರಿ ಒಟ್ಟು 13 ಜನ ಆಡಳಿತ ಮಂಡಳಿ ಸದಸ್ಯರು ಸೇವೆ ಸಲ್ಲಿಸುತ್ತಿದ್ದಾರೆ. ಸದಸ್ಯರಿಗೆ ಅನುಕೂಲವಾಗುವಂತೆ ಸಂಘದಲ್ಲಿ ಉಪಸಮಿತಿಗಳನ್ನು ರಚಿಸಿಕೊಳ್ಳಲಾಗಿದೆ. 2023–24ನೇ ಸಾಲಿನಲ್ಲಿ ಒಟ್ಟು 16 ಆಡಳಿತ ಮಂಡಳಿ ಸಭೆಗಳು, 05 ಉಪಸಮಿತಿ ಸಭೆಗಳು, 1 ಮಹಾಸಭೆ ನಡೆದಿರುತ್ತದೆ.

**ಸಿಬ್ಬಂದಿ ವರ್ಗ ಮತ್ತು ಸಿಬ್ಬಂದಿ ವೆಚ್ಚ :**

ದಿ. 31–03–2024ಕ್ಕೆ ಸಂಘದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೇರಿ 30 ಜನ ಖಾಯಂ ನೌಕರರು ಹಾಗೂ 02 ಜನ ಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ವರದಿ ಸಾಲಿನಲ್ಲಿ ಒಬ್ಬ ಶಾಖಾ ವ್ಯವಸ್ಥಾಪಕ, 12 ಗುಮಾಸ್ತರನ್ನು ಹಾಗೂ ಒಬ್ಬ ಜವಾನನನ್ನು ಸಹಕಾರ ಸಂಘಗಳ ನಿಯಮಗಳು 1960 (ನಿಯಮ 17 ಎ) ಪ್ರಕಾರ ನೇಮಕಾತಿ ಮಾಡಲಾಗಿದೆ.

ವರದಿ ಸಾಲಿನಲ್ಲಿ ಒಟ್ಟು ರೂ. 1,12,38,370.00 ಸಿಬ್ಬಂದಿ ವೆಚ್ಚ ಆಗಿರುತ್ತದೆ. ಸಿಬ್ಬಂದಿ ವೆಚ್ಚವನ್ನು ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ 0.98 ರಷ್ಟು ಆಗುವುದು.

**ಸಂಘದ ಇತರ ಸೇವೆಗಳು :**

ಸಂಘದ ಬಿ.ಸಿ.ರೋಡು ಹಾಗೂ ಕಲ್ಲಡ್ಕ ಶಾಖೆಗಳಲ್ಲಿ ಇ–ಸ್ಟ್ಯಾಂಪ್ ಛಾಪಾ ಕಾಗದ ವಿತರಿಸುತ್ತಿದ್ದೇವೆ. ಸದಸ್ಯ ಗ್ರಾಹಕರ ಅನುಕೂಲಕ್ಕಾಗಿ RTGS / NEFT ಸೌಲಭ್ಯಗಳನ್ನು ನೀಡುತ್ತಿದ್ದೇವೆ. ಈ ಎಲ್ಲಾ ಸೌಲಭ್ಯಗಳನ್ನು ಸದಸ್ಯರು ಪಡೆಯಬೇಕೆಂದು ಕೋರುತ್ತೇವೆ. ಗ್ರಾಹಕ ಸದಸ್ಯರ ಬೇಡಿಕೆಗಳಿಗೆ ತ್ವರಿತವಾಗಿ ಸ್ಪಂದಿಸುವ ನಿಟ್ಟಿನಲ್ಲಿ ಒಂದು ಶಾಖೆಯ ಗ್ರಾಹಕರು ಇನ್ನೊಂದು ಶಾಖೆಗೆ ಹೋಗಿ ವ್ಯವಹಾರ ಮಾಡಲು ಅನುಕೂಲವಾಗುವಂತೆ ಸಂಘದ ಎಲ್ಲಾ ಶಾಖೆಗಳಲ್ಲಿ Core Banking ವ್ಯವಸ್ಥೆ ಕಲ್ಪಿಸಲಾಗಿದೆ ಹಾಗೂ ಸದಸ್ಯರಿಗೆ SMS ALERT ಸೇವೆಯನ್ನು ನೀಡಲಾಗುತ್ತಿದೆ.

**ವ್ಯವಹಾರ ಮತ್ತು ಲಾಭ :**

2023–24ನೇ ಸಾಲಿನಲ್ಲಿ ರೂ.**695,92,93,568.46** ವಾರ್ಷಿಕ ವ್ಯವಹಾರ ನಡೆದಿರುತ್ತದೆ. 2023–24ನೇ ಸಾಲಿನಲ್ಲಿ ರೂ.**2,10,00,093.97** ನಿವ್ವಳ ಲಾಭವನ್ನು ಲೆಕ್ಕ ಪರಿಶೋಧಕರು ದೃಢಪಡಿಸಿದ್ದು, ಆಡಿಟ್ ವರ್ಗೀಕರಣದಲ್ಲಿ 'ಎ' ಗ್ರೇಡ್ ಬಂದಿರುತ್ತದೆ. ಲಾಭವನ್ನು ಸಂಘದ ಬೈಲಾ ಪ್ರಕಾರ ವಿಂಗಡಿಸಲು ಸರ್ವ ಸದಸ್ಯರ ಸಭೆಗೆ ಶಿಫಾರಸು ಮಾಡುತ್ತೇವೆ.


ವಾರ್ಷಿಕ ವಹಿವಾಟು (ರೂ. ಲಕ್ಷಗಳಲ್ಲಿ)
80000
70000
60000
50000
40000
30000
20000
10000
0
29405.95
32091.26
36878.87
49217.27
69592.93
2019-20
2020-21
2021-22
2022-23
2023-24


ನಿವ್ವಳ ಲಾಭ (ರೂ.ಲಕ್ಷಗಳಲ್ಲಿ)
250
200
150
100
50
0
117.28
147.15
173.44
183.50
210.00
2019-20
2020-21
2021-22
2022-23
2023-24

**ಲೆಕ್ಕಪರಿಶೋಧಕರ ನೇಮಕಾತಿ :**

2024–25ನೇ ಸಾಲಿನ ಲೆಕ್ಕ ಪರಿಶೋಧನೆ ನಡೆಸಲು ಸಿ.ಎ. ವಿವಿಯಾನ್ ಪಿಂಟೊ ಮತ್ತು ಕೋ., ಚಾರ್ಟರ್ಡ್ ಅಕೌಂಟೆಂಟ್ಸ್, ಎಮ್‌ಜೇಸ್ ಕಾಂಪ್ಲೆಕ್ಸ್, ಬಲ್ಮಠ, ಮಂಗಳೂರು ಇವರನ್ನು ನೇಮಕ ಮಾಡಲು ಮಹಾಸಭೆಯ ಮಂಜೂರಾತಿಗಾಗಿ ಆಡಳಿತ ಮಂಡಳಿ ಶಿಫಾರಸು ಮಾಡಿದೆ.

**ಪಾಲು ಮುನಾಫೆ ಮತ್ತು ಬೋನಸ್ :**

ಸಂಘದ 'ಎ' ಮತ್ತು 'ಡಿ' ವರ್ಗದ ಸದಸ್ಯರಿಗೆ 2022–23 ಸಾಲಿಗೆ ಶೇ 16ರಷ್ಟು ಪಾಲು ಮುನಾಫೆ ಪಾವತಿ ಮಾಡಲಾಗಿದೆ. ನೌಕರರಿಗೆ 45 ದಿನಗಳ ಬೋನಸ್ ಮತ್ತು ಎಕ್ಸ್‌ಗ್ರೇಷಿಯ ಪಾವತಿ ಮಾಡಲಾಗಿದೆ. ಸಂಘದಲ್ಲಿ ಉಳಿತಾಯ ಖಾತೆಯನ್ನು ಹೊಂದಿರುವ ಸದಸ್ಯರ ಪಾಲು ಮುನಾಫೆಯನ್ನು ಖಾತೆಗೆ ಜಮಾ ಮಾಡಲಾಗಿದೆ ಮತ್ತು ಉಳಿದವರಿಗೆ NEFT ಮೂಲಕ ಪಾವತಿಸಲಾಗಿದೆ. ದಿನಾಂಕ 31–03–2024ರ ಅಂತ್ಯಕ್ಕೆ 'ಎ' ವರ್ಗದ ಸದಸ್ಯರಿಗೆ ರೂ. 2.73 ಲಕ್ಷ ಪಾಲು ಮುನಾಫೆ ಹಾಗೂ 'ಡಿ' ವರ್ಗ ಸದಸ್ಯರಿಗೆ ರೂ. 0.73 ಲಕ್ಷ ಪಾಲುಮುನಾಫೆ ಪಾವತಿಸಲು ಬಾಕಿ ಇರುತ್ತದೆ. ಸಹಕಾರಿ ಸಂಘಗಳ ಕಾಯಿದೆ ಪ್ರಕಾರ ಸತತವಾಗಿ ಮೂರು ವರ್ಷ ಪಾಲು ಮುನಾಫೆಯನ್ನು ಪಡಕೊಳ್ಳದೇ ಇದ್ದಲ್ಲಿ ಸದ್ರಿ ಮೊತ್ತವನ್ನು ಕಾದಿರಿಸಿದ ನಿಧಿಗೆ ವರ್ಗಾಯಿಸಬೇಕಾಗುತ್ತದೆ. ಆದುದರಿಂದ ಪಾಲು ಮುನಾಫೆಯನ್ನು ಪಡೆಯದೇ ಇದ್ದ ಸದಸ್ಯರು ಪ್ರಧಾನ ಕಛೇರಿಗೆ ಬಂದು ಪಡೆಯಲು ಅಥವಾ ಸಮೀಪದ ಶಾಖೆಯಲ್ಲಿ ಉಳಿತಾಯ ಖಾತೆ ತೆರೆಯಲು ಅಥವಾ ಇತರ ಯಾವುದೇ ಬ್ಯಾಂಕಿನ ಖಾತೆ ನೀಡಿದ್ದಲ್ಲಿ NEFT ಸೌಲಭ್ಯದ ಮೂಲಕ ಪಾಲುಮುನಾಫೆಯನ್ನು ಪಡಕೊಳ್ಳಲು ವಿನಂತಿಸುತ್ತೇವೆ.

ವರದಿ ಸಾಲಿಗೆ ಶೇಕಡಾ 16 ರಷ್ಟು ಪಾಲು ಮುನಾಫೆ ನೀಡಲು ಮತ್ತು ನೌಕರರಿಗೆ 45 ದಿನಗಳ ವೇತನದಷ್ಟು ಬೋನಸ್ ಮತ್ತು ಎಕ್ಸ್‌ಗ್ರೇಷಿಯ ನೀಡಲು ಆಡಳಿತ ಮಂಡಳಿ ಪ್ರಸ್ತಾಪಿಸಿದೆ.

**2023–24ನೇ ಸಾಲಿಗೆ ಸಂಘದ ನಿರ್ದೇಶಕರು ಪಡೆದ ಸಭಾ ಭತ್ಯೆ ಹಾಗೂ ಇತರ ವೆಚ್ಚ :**

ವರದಿ ಸಾಲಿನಲ್ಲಿ 7 ಆಡಳಿತ ಮಂಡಳಿ ಸದಸ್ಯರು ಪಡೆದ ಸಭಾ ಭತ್ಯೆ ರೂ. 1,13,500.00 ಆಗಿರುತ್ತದೆ. ಸಂಘದ ಎಲ್ಲಾ ಶಾಖೆಗಳಲ್ಲಿರುವ ಸ್ಥಿರ ಚರ ಸೊತ್ತು ಹಾಗೂ ಅಡಮಾನಕ್ಕೆ ಬಂದಿರುವ ಚಿನ್ನಾಭರಣಗಳನ್ನು ಭೌತಿಕವಾಗಿ ಪರೀಕ್ಷಿಸಲು ಆಡಳಿತ ಮಂಡಳಿ ಸಮಿತಿ ರಚಿಸಿದ್ದು, ಸದ್ರಿ ಪರಿವೀಕ್ಷಣೆಗಾಗಿ 12 ಜನ ಆಡಳಿತ ಮಂಡಳಿ ಸದಸ್ಯರಿಗೆ ನೀಡಿದ ಮೊತ್ತ ರೂ. 18,000/– ಆಗಿರುತ್ತದೆ.

**ಕಾರ್ಯಗತವಾದ ಯೋಜನೆ :**

ಸಂಘದ ಪ್ರಧಾನ ಕಛೇರಿ ಹಾಗೂ ಬಿ.ಸಿ.ರೋಡು ಶಾಖೆಗೆ ಪಾರ್ಕಿಂಗ್ ವ್ಯವಸ್ಥೆ ಇಲ್ಲದೆ ಸದಸ್ಯರಿಗೆ ಅನಾನುಕೂಲವಾಗುತ್ತಿದ್ದು, ಬಿ.ಸಿ.ರೋಡು ಕೈಕಂಬ ಬಳಿ ಖರೀದಿಸಿದ ನಿವೇಶನದಲ್ಲಿ ನೂತನ ಕಟ್ಟಡ ಕಾಮಗಾರಿ ನಿರ್ಮಿಸಲು ರೂಪುರೇಷೆ ಸಿದ್ಧವಾಗುತ್ತಿದ್ದು, ಶೀಘ್ರದಲ್ಲಿ ಕಾರ್ಯಾರಂಭಗೊಳ್ಳಲಿದೆ. ಸಂಘದ ಹೊಸ ಶಾಖೆಯನ್ನು ಫಜೀರು ಗ್ರಾಮದ ಗ್ರಾಮಚಾವಡಿಯಲ್ಲಿ ತೆರೆಯಲು ಯೋಜಿಸಿದ್ದು, ಈ ಬಗ್ಗೆ ಇಲಾಖಾ ಅನುಮತಿ ಪಡೆದು ಶೀಘ್ರದಲ್ಲೇ ಶಾಖೆಯನ್ನು ತೆರೆಯಲು ನಿರ್ಧರಿಸಲಾಗಿದೆ.

**ಮುಂದಿನ ಯೋಜನೆಗಳು :**

* ಕಾರ್ಯಕ್ಷೇತ್ರಗಳಲ್ಲಿ ಶಾಖೆಗಳನ್ನು ತೆರೆಯುವುದು.
* ಸಂಘವನ್ನು ಬಲಪಡಿಸುವ ಉದ್ದೇಶದಿಂದ ಸಂಘಕ್ಕೆ ಸಂಪನ್ಮೂಲ ಕ್ರೋಢೀಕರಿಸುವ ಸಲುವಾಗಿ ಹೆಚ್ಚಿನ ಸದಸ್ಯರುಗಳ ಸೇರ್ಪಡೆ
* ಠೇವಣಿ/ಸಾಲದಲ್ಲಿ ವೃದ್ಧಿ

**ಪ್ರಶಸ್ತಿಗಳು :**

ನಮ್ಮ ಸಂಸ್ಥೆಯು ಸಾಧಿಸಿದ ಸರ್ವತೋಮುಖ ಅಭಿವೃದ್ಧಿಗಾಗಿ ಸಹಕಾರ ಇಲಾಖೆ ಮತ್ತು ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಿಂದ ಒಟ್ಟು 8 ಬಾರಿ ಪ್ರಶಸ್ತಿಯನ್ನು ಸಂಘವು ಪಡೆದಿರುತ್ತದೆ.

**ಅಭಿನಂದನೆಗಳು ಮತ್ತು ಕೃತಜ್ಞತೆಗಳು :**

